# ಅಣುಶಕ್ತಿ ಕೇಂದ್ರೀಯ ವಿದ್ಯಾಲಯ, ಮೈಸೂರು

**ಅರ್ಧವಾರ್ಷಿಕ ಪರೀಕ್ಷೆ- ಸಪ್ಟೆಂಬರ್ -೨೦೨೪**

**ವಿಷಯ : ಕನ್ನಡ**

**ವಿದ್ಯಾರ್ಥಿಯ ಹೆಸರು: ಕ್ರಮ ಸಂಖ್ಯೆ:**

**ತರಗತಿ:೩ ದಿನಾಂಕ :**

**ಅವಧಿ:೩ ಗಂಟೆ ಸಂವೀಕ್ಷಕರ ಸಹಿ:**

**ಪರೀಕ್ಷಕರ ಸಹಿ : ಅಂಕಗಳು:೮೦**

**ವಿಭಾಗ - ಎ ( ಓದುವ ಕೌಶಲ)**

**I. ಕೆಳಗಿನ ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು,ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ. ೫**

ಅ ) ನಮ್ಮನ್ನು ಬ್ರಿಟಿಷರು ಆಳುತ್ತಿದ್ದ ಕಾಲ. ನಾವು ಅವರ ಗುಲಾಮರಾಗಿ ತುಂಬಾ ನೋವು, ಹಿಂಸೆ ಅನುಭವಿಸಬೇಕಾಗಿತ್ತು. ಬ್ರಿಟಿಷರನ್ನು ಭಾರತದಿಂದ ಓಡಿಸಬೇಕು, ನಾವು ಸ್ವತಂತ್ರರಾಗಬೇಕು ಎಂಬ ಛಲ ಭಾರತೀಯರಲ್ಲಿ ಮೂಡಿತು. ಮಹಾತ್ಮ ಗಾಂಧಿಯವರು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಚಳುವಳಿ ಆರಂಭಿಸಿದರು. ಇದರಿಂದ ಪ್ರೇರಿತರಾದ ನನ್ನ ಜನತೆ ಬ್ರಿಟಿಷ್ ಸರ್ಕಾರಕ್ಕೆ ತೆರಿಗೆ ಕೊಡದಂತೆ ಚಳುವಳಿ ನಡೆಸಿದರು. ಅಧಿಕಾರಿಗಳಿಗೆ ಹೆದರದಂತೆ ಜನರಿಗೆ ಕರೆಕೊಟ್ಟರು. ಸರ್ಕಾರಿ ಅಧಿಕಾರಿಗಳಿಗೆ, ಕಚೇರಿಗಳಿಗೆ ಧಿಕ್ಕಾರ ಕೂಗಿದರು. ೨೫ ಸೆಪ್ಟೆಂಬರ್ ೧೯೪೨ ರಂದು ಬ್ರಿಟಿಷ್ ಸರ್ಕಾರದ ಅಧಿಕಾರವನ್ನು ಧಿಕ್ಕರಿಸಿದರು. 'ಏಸೂರು ಕೊಟ್ಟರು ಈಸೂರು ಬಿಡೆವು' ಎಂಬ ಜನರ ಘೋಷಣೆ ಮುಗಿಲು ಮುಟ್ಟಿತು. ನನ್ನನ್ನು 'ಸ್ವತಂತ್ರ ಹಳ್ಳಿ' ಎಂದು ಸಾರಿದರು. ತಮ್ಮದೇ ಆದ ಸರ್ಕಾರ ರಚಿಸಿಕೊಂಡು ಗ್ರಾಮದ ಆಡಳಿತ ನಡೆಸಲು ಪಣತೊಟ್ಟರು.

**ಪ್ರಶ್ನೆಗಳು:**

೧. ಭಾರತೀಯರಲ್ಲಿ ಯಾವ ಛಲವು ಮೂಡಿತು?

______________________________________________

೨. 'ಚಳುವಳಿ' ಪದಕ್ಕೆ ಸ್ವಂತ ವಾಕ್ಯ ರಚಿಸಿ.

______________________________________________

೩.' ಹಿಂಸೆ ' ಪದದ ವಿರುದ್ಧಾರ್ಥಕ ಪದ_____

೪. ಗಾಂಧೀಜಿಯವರು ಯಾವ ಚಳುವಳಿಯನ್ನು ಆರಂಭಿಸಿದರು ?

______________________________________________

೫. ಜನರ ಯಾವ ಘೋಷಣೆ ಮುಗಿಲು ಮುಟ್ಟಿತು?

______________________________________________

**ಆ ) ಕೆಳಗಿನ ಪದ್ಯವನ್ನು ಓದಿ, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.೫**

ಆಮೆಯೊಂದು  ಕೆರೆಯ ದಡದಿ
ಮನೆಯ ಮಾಡಿತು
ಹಕ್ಕಿಯಂತೆ ಹಾರಬೇಕು
ಎಂದು ಬಯಸಿತು
ಹಕ್ಕಿ ಜೊತೆಗೆ ಸಂಗಮಾಡಿ
ಆಸೆ ತಿಳಿಸಿತು
ಹಕ್ಕಿ ಹೇಳಿದಂತೆ ಆಮೆ
ಕೇಳಲೊಪ್ಪಿತು
ಅತ್ತ ಇತ್ತ ಹಕ್ಕಿ ಎರಡು
ಬಡಿಗೆ ಹಿಡಿದವು
ಆಮೆ ಅದಕೆ ಜೋತು ಬೀಳೆ
ಹಾರಿ ಹೋದವು
ದಾರಿಯಲ್ಲಿ ಇದನು ಕಂಡು
ಜನರು ನಕ್ಕರು
ಮಾನ ಹೋಯಿತೆಂದು ಆಮೆ
ಮನದಿ ಕುದಿಯಿತು
ನಕ್ಕ ಜನರ ಬಯ್ಯಲೆಂದು
ಬಾಯಿ ತೆರೆಯಿತು
ಮೇಲಿನಿಂದ ಕೆಳಗೆ ಬಿದ್ದು
ಸತ್ತು ಹೋಯಿತು

**ಪ್ರಶ್ನೆಗಳು:**

೧. 'ಆಸೆ' ಪದದ ವಿರುದ್ಧಾರ್ಥಕ ರೂಪ_____

೨. ಆಮೆಯು ಎಲ್ಲಿ ಮನೆಯನ್ನು ಮಾಡಿತ್ತು?

______________________________________________________________

೩. ಆಮೆಯು ಯಾರ ಜೊತೆ ಸಂಗ ಮಾಡಿತು?

______________________________________________________________

೪. ಹಕ್ಕಿಗಳು ಅತ್ತ ಇತ್ತ ಏನು ಹಿದಿದ್ದವು?

______________________________________________________________

೫. 'ಹೋಯಿತೆಂದು' ಪದ ಬಿಡಿಸಿದಾಗ

________________+________________

**ಇ ) ಕೆಳಗಿನ ಗದ್ಯ ಭಾಗವನ್ನು ಓದಿ,ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.೫**

ಇ) ದೊಡ್ಡ ಕಾಗೆ ಸಮುದ್ರ ತೀರದಲ್ಲಿ ಆಹಾರ ಹುಡುಕುತ್ತಾ ಇತ್ತು.ಅದರ ಕಣ್ಣಿಗೆ ಒಂದು ಚಿಪ್ಪುಹುಳು ಕಾಣಿಸಿತು. ಚಿಪ್ಪಿನ ಮೇಲೆ ಅನೇಕ ಸಾರಿ ಕುಟ್ಟಿದರೂ ಅದು ಒಡೆಯಲಿಲ್ಲ. ಹುಳು ಹೊರಕ್ಕೆ ಬರಲಿಲ್ಲ.ಕಾಗೆಯ ಈ ಪ್ರಯತ್ನವನ್ನು ಸಮೀಪದಲ್ಲಿ ಕುಳಿತಿದ್ದ ಹದ್ದು ನೋಡುತ್ತಾ ಇತ್ತು. ಅದು ಕಾಗೆಗೆ ಹೀಗೆ ಹೇಳಿತು, 'ಬಲಹಾಕಿ ಮಾಡಲು ಆಗದೇ ಇರುವುದನ್ನು ಉಪಾಯದಿಂದ ಮಾಡಬಹುದು.ಆ ಚಿಪ್ಪು ಪ್ರಾಣಿಯನ್ನು ಮೇಲಕ್ಕೆ ತಕೊಂಡು ಹೋಗು.ಆ ಬಂಡೆಯ ಮೇಲೆ ಬೀಳಿಸು ಚಿಪ್ಪು ಹೊಡೆಯುತ್ತದೆ. ಹುಳು ಹೊರಕ್ಕೆ ಬರುತ್ತದೆ.ನೀನು ಅದನ್ನು ತಿನ್ನಬಹುದು 'ಎಂದು ಹೇಳಿತು.ಕಾಗೆ ಹಾಗೆಯೇ ಮಾಡಿತು.ಬಂಡೆಯ ಮೇಲೆ ಬಿದ್ದ ಕೂಡಲೇ ಚಿಪ್ಪಿನಿಂದ ಹುಳು ಹೊರಕ್ಕೆ ಬಂತು.ಆದರೆ ಅದು ಕಾಗೆಗೆ ಸಿಗಲಿಲ್ಲ.ಪಕ್ಕದಲ್ಲಿ ಹಾರಾಡುತ್ತಿದ್ದ ಹದ್ದು ಹುಳುವನ್ನು ಎಗರಿಸಿಕೊಂಡು ದೂರಕ್ಕೆ ಹಾರಿಹೋಯಿತು.ಪೆದ್ದು ಕಾಗೆ ಪಿಳಿಪಿಳಿ ಕಣ್ಣು ಬಿಡುತ್ತಾ ಕುಳಿತುಕೊಂಡಿತು.

ಪ್ರಶ್ನೆಗಳು**:**

೧. ಕಾಗೆಯ ಕಣ್ಣಿಗೆ ಏನು ಕಾಣಿಸಿತು?

_____________________________________________________________________________

೨. ಕಾಗೆಯ ಪ್ರಯತ್ನವನ್ನು ಯಾರು ನೋಡುತ್ತಿದ್ದರು?

_____________________________________________________________________________

೩. 'ಹಾರಾಡುತ್ತಿದ್ದ' ಈ ಪದವನ್ನು ಬಿಡಿಸಿದಾಗ

______________+____________________

೪. ಕಾಗೆ ಕೊನೆಗೆ ಹೇಗೆ ಕುಳಿತುಕೊಂಡಿತು?

_____________________________________________________________________________

೫. 'ಉಪಾಯ' ಈ ಪದಕ್ಕೆ ಸ್ವಂತ ವಾಕ್ಯ ರಚಿಸಿ.

_____________________________________________________________________________

**ಈ) ಕೆಳಗಿನ ಪದ್ಯ ಭಾಗವನ್ನು ಓದಿ , ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.೫**

ಹಬ್ಬ ಬಂತು, ಹಬ್ಬ ಬಂತು
ಹಬ್ಬ ಬಂತು ಹಬ್ಬ !
ಅಂತೂ ಇಂತೂ ತಂದೆ-ತಂತು

ಕಂತೆ ಕಂತೆ ಕಬ್ಬ !
ಗರಿಮುರಿ ಜರತಾರಿ
ಲಂಗ ಹಾಕಿಕೊಂಡು!
ಗಿಲಿ ಗಿಲಿ ಕಾಲಗೆಜ್ಜೆ
ದನಿ ಮಾಡಿಕೊಂಡು!
ಎಳ್ಳು ,ಕಬ್ಬು, ಸಕ್ರೆ ,ಅಚ್ಚು
ಬಾಳೆಹಣ್ಣು, ಬೆಲ್ಲ !
ಬೀರೋಕಂತ ಹೊರಟಿದ್ದಾಳೆ
ತಂಗಿ ಕೇರಿಗೆಲ್ಲ .
ಹೊರಟಿದ್ದಾಳೆ ಪುಟಾಣಿ ತಂಗಿ
ತನ್ನ ಗೆಳತಿ ಜೋಡಿ!
ರಂಗೇನಳ್ಳಿ ರಂಗಿನ ಗೊಂಬಿ
ಕಣ್ಣ ತುಂಬ ನೋಡಿ!

**ಪ್ರಶ್ನೆಗಳು:**

೧. ಹಬ್ಬ ಏನನ್ನು ತಂತು?

_______________________________________________________________

_

೨. ತಂಗಿ ಯಾವ ದನಿ ಮಾಡಿಕೊಂಡು ಬರುತ್ತಿದ್ದಾಳೆ?

_______________________________________________________________

_

೩. 'ಬೀರೋಕಂತ'ಈ ಪದವನ್ನು ಬಿಡಿಸಿ ಬರೆದಾಗ____________+_______________

೪. ತಂಗಿಯು ಯಾರ ಜೊತೆ ಹೊರಟಿದ್ದಾಳೆ?

_______________________________________________________________

_

೫. ತಂಗಿಯು ಏನೇನು 'ಬೀರೋಕಂತ' ಹೊರಟಿದ್ದಾಳೆ?

_______________________________________________________________

_

**ವಿಭಾಗ - ಬಿ ( ಅನ್ವಯಿಕ ವ್ಯಾಕರಣ)**

**I. ಕೆಳಗಿನ ಪದಗಳ ಅರ್ಥ ಬರೆಯಿರಿ.೨**

ಅ ) ಜಂಭ _____ ಆ) ಬೀರು______ ಇ ) ಪತಾಕೆ ______ ಈ ) ಲೂಟಿ _______

**II. ಕೆಳಗಿನ ಪದಗಳಿಗೆ ಪ್ರಾಸ ಪದಗಳನ್ನು ಬರೆಯಿರಿ.೨**

**ಮಾದರಿ: ಪಾಲಾಯ್ತು -ಬೋಳಾಯ್ತು**

ಅ ) ಬೀದಿಯಲ್ಲಿ ___________

ಆ ) ಅಚ್ಚು ____________

**III. ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ .೨**

**ಮಾದರಿ:ಆಯುಧವಿಲ್ಲದೆ=ಆಯುಧ+ಇಲ್ಲದೆ**

ಅ ) ಗಾಂಧೀಜಿಯವರು _____________+_________

ಆ ) ಕಾಡಾನೆ ___________+___________

**IV. ಕೆಳಗಿನ ಪದಗಳನ್ನು ಮಾದರಿಯಂತೆ ಜೋಡಿಸಿ ಬರೆ.೨**

**ಮಾದರಿ: ಕಾಯುತ+ ಇರುವೆನು= ಕಾಯುತಿರುವೆನು**

ಅ ) ಗೋಳು + ಆಯ್ತು=_________

ಆ ) ನೋವು+ ಆಯ್ತು __________

**V. ಕೆಳಗಿನ ನುಡಿಗಟ್ಟುಗಳ ಅರ್ಥ ಬರೆಯಿರಿ.೨**

ಅ ) ಎತ್ತಿದ ಕೈ __________

ಆ) ರೈಲು ಬಿಡು_________

**VI. ಕೆಳಗಿನ ಪದಗಳ ವಿರುದ್ಧಾರ್ಥಕ ಪದ ಬರೆಯಿರಿ.೩**

ಅ ) ಧೀರ×______________

ಆ ) ಉಳಿವು×____________

ಇ) ಆರಂಭ×______________

**VII. ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸು .೩**

(ದೊಣ್ಣೆಗೆ ನಿಮಿಷ, ಮಹಾರಾಯ, ಬಾಯಿ ಮೊಸರು, ಕೋಣನ ನೀರಿಗೆಳೆಯಿತು)

ಅ )  ಮಾಡಿದ್ದುಣ್ಣೋ -

________________________________________________

ಆ ) ಎತ್ತು ಏರಿಗೆ ಎಳೆದರೆ-

________________________________________________

ಇ ) ಕುಂಬಾರನಿಗೆ ವರುಷ -

________________________________________________

**VIII.ಮಾದರಿಯಂತೆ ಜೋಡುನುಡಿಗಳನ್ನು ಬರೆಯಿರಿ .೩**
**ಮಾದರಿ: ಬೆಟ್ಟ- ಬೆಟ್ಟಗುಡ್ಡ**
(ನಲಿವು, ಕಹಿ, ಗುಡ್ಡ, ತೋರಣ, ಕೊಳ್ಳ)

ಅ ) ತಳಿರು -

____________________

ಆ ) ನೋವು -

_________________

ಇ ) ಸಿಹಿ  -

__________________

**IX. ಕೆಳಗಿನ ಪದಗಳ ಲಿಂಗ ರೂಪ ಬದಲಿಸಿ ಬರೆಯಿರಿ.೨**
**ಮಾದರಿ: ಬಾಲಕ-ಬಾಲಕಿ**
ಅ ) ಅವನು_______
ಆ )  ಅಮ್ಮ________

**X. ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.೩**
೧. ನಾಡ ನಮ್ಮ ಹಬ್ಬ ದಸರಾ

_______________________________________________________

_

೨. ಸಮವಸ್ತ್ರ ಮಕ್ಕಳು ಧರಿಸಿ ಬಂದರು ಶಾಲೆಗೆ

_______________________________________________________________________

೩. ಪ್ರವೇಶವಿಲ್ಲ ಅಧಿಕಾರಿಗಳಿಗೆ ಬೇಜವಾಬ್ದಾರಿ ಈಸೂರಿಗೆ

_______________________________________________________________________

**XI. ಸರಿ - ತಪ್ಪು ಗುರುತಿಸಿ.೩**

ಅ ) ಬ್ರಿಟಿಷ್ ಅಧಿಕಾರಿಗಳು ಗ್ರಾಮ ಪ್ರವೇಶಿಸದಂತೆ ಜನರು ಪ್ರತಿಭಟಿಸಿದರು. ( )

ಆ ) ಪದಗಳಲ್ಲಿನ ಅಕ್ಷರಗಳನ್ನು ಒಂದೇ ಗಾತ್ರದಲ್ಲಿ ಬರೆಯಬಾರದು. ( )

ಇ) ಸಭೆಯಲ್ಲಿ ಒಟ್ಟಾಗಿ ಮಾತನಾಡಿದರೆ ತೊಂದರೆ. ( )

**XII. ಕೊಟ್ಟಿರುವ ಪದಗಳನ್ನು ಸರಿಯಾದ ರೂಪದಲ್ಲಿ ಬರೆಯಿರಿ.೩**

೧. ಕೂತುಹಲ __________

೨. ನಿಡುಗಟ್ಟು __________

೩. ಜಾಲಪಾತ __________

**XIII. ಕೆಳಗಿನ ಪದಗಳಿಗೆ ಸ್ವಂತ ವಾಕ್ಯ ರಚಿಸಿ.೩**

ಅ ) ಪ್ರಾಮಾಣಿಕತೆ

_______________________________________________________________________

______________________________

ಆ ) ಹಬ್ಬ

_______________________________________________________________________

______________________________

ಇ ) ಸಮವಸ್ತ್ರ

_______________________________________________________________________

______________________________

**ವಿಭಾಗ - ಸಿ ( ಬರವಣಿಗೆ ಕೌಶಲ )**

**ಅ) ಕೆಳಗಿನ ಚಿತ್ರವನ್ನು ನೋಡಿ, ಸೂಕ್ತವಾದ 5-6 ವಾಕ್ಯಗಳನ್ನು ಬರೆಯಿರಿ.೫**



–

–

–

–

–

–

–

–

–

**ವಿಭಾಗ - ಡಿ (ಪಠ್ಯಗಳ ಅಧ್ಯಯನ)**

**I. ಬಿಟ್ಟ ಸ್ಥಳವನ್ನು ಸೂಕ್ತವಾದ ಉತ್ತರವನ್ನು ಆರಿಸಿ ತುಂಬಿರಿ.೫**

೧. ಅಪ್ಪ ದನಕರುಗಳಿಗೆ ________ಕೊಟ್ಟರು.

ಅ ) ಎತ್ತು- ಹಸು- ಕರು ಆ ) ಅಕ್ಕಿ -ಬೆಲ್ಲ -ಹಣ್ಣು

ಇ ) ಎಳ್ಳು - ಸಕ್ರೆ

೨. ಶಾಸ್ತ್ರಿಯವರಲ್ಲಿ _________ಪುಟಿದೆದ್ದಿತು.

ಅ ) ದೇಶಪ್ರೇಮ ಆ ) ಪರಿಸರ ಪ್ರೇಮ ಇ ) ಅಧಿಕಾರ ಪ್ರೇಮ

೩. ಈಸೂರಿನ ಜನತೆ ತಮ್ಮ ಹಳ್ಳಿಯನ್ನು_________ ಎಂದು ಘೋಷಿಸಿದರು.

ಅ ) ಈಸೂರು ಆ ) ಬ್ರಿಟಿಷ್ ಹಳ್ಳಿ ಇ ) ಸ್ವತಂತ್ರ ಹಳ್ಳಿ

೪. ವಿವೇಕಾನಂದರ ಬಾಲ್ಯದ ಹೆಸರು _________

ಅ ) ನರೇಂದ್ರ ಆ ) ಸಿದ್ದಾರ್ಥ ಇ ) ವಿವೇಕ

೫. ಮಾನವ__________ಅಂಜುಬುರ್ಗಾ ಪ್ರಾಣಿ ಎಂದು ಹೇಳಿದನು.

ಅ) ಮೊಲ ಆ) ಮಂಗ ಇ) ಜಿಂಕೆ

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.೫**

೧. ಕಸ್ತೂರಿಯಲ್ಲಿ ತುತ್ತೂರಿ ಊದಿದನು?

_______________________________________________

೨. ಮುಖ್ಯ ಗುರುಗಳು ಯಾರ ಸಭೆ ಕರೆದರು ?

_______________________________________________

೩. ಅಳುವ ಕಂದನ ಕಣ್ಣೋಟ ಹೇಗಿರುತ್ತದೆ?

_______________________________________________

೪. ಮಕ್ಕಳು ಏಕೆ ಗಲಿಬಿಲಿಗೊಂಡರು?

_______________________________________________

೫. ಮಕ್ಕಳನ್ನು ಹಸೆಯಲ್ಲಿ ಕೂರಿಸಿ ಏನು ಮಾಡುವರು ?

_______________________________________________

**III.** ಈ ಮಾತನ್ನು ಯಾರು ಯಾರಿಗೆ ಹೇಳಿದರು**?** ೩

೧. "ನಿನ್ನ ಈ ಗುಣ ನಿನ್ನನ್ನು ದೊಡ್ಡ ವ್ಯಕ್ತಿಯನ್ನಾಗಿ ಮಾಡುತ್ತದೆ "

_______________________________________________

೨. "ಒಳ್ಳೆಯದು ,ಮೇರಿಯ ಸಲಹೆ ಎಲ್ಲರಿಗೂ ಒಪ್ಪಿಗೆ ಯೇ "

______________________________________________

೩. "ಸಾಲುಮರದ ತಿಮ್ಮಕ್ಕನನ್ನು ನೋಡಿ ಕಲಿ "

______________________________________________

**III . ಕೆಳಗಿನ ಪ್ರಶ್ನೆಗಳಿಗೆ ಎರಡು-�ೂರು ವಾಕ್ಯದಲ್ಲಿ ಉತ್ತರಿಸಿ.೪**

೧. ಬಾಲಕ ಮಾಲೀಕನಿಗೆ ಏನೆಂದು ಹೇಳಿದನು?

______________________________________________

______________________________________________

______________________________________________

೨. ಆಡಿ ಬರುವ ಕಂದನನ್ನು ತಾಯಿ ಹೇಗೆ ಉಪಚರಿಸುವಳು ?

______________________________________________

______________________________________________

______________________________________________

______________________________________________

**IV.** ಕಾರಣ ಕೊಡಿ. ೨
೧. ಇತರರು ಮಾತನಾಡುವಾಗ ಕೇಳಿಸಿಕೊಳ್ಳಬೇಕು.

______________________________________________

______________________________________________

______________________________________________

______________________________________________

**IV. ಕೆಳಗೆ ನೀಡಿರುವಾಗ ಗದ್ಯಭಾಗವನ್ನು,ಅಂದವಾಗಿ ನಕಲು ಮಾಡಿ ಬರೆಯಿರಿ.೩**
ನಾವು ಮುದ್ರಿತಾ ವಿಷಯಗಳನ್ನು ಮಾತ್ರ ಓದುವುದಿಲ್ಲ ಕೆಲವು ವೇಳೆ ಕೈ ಬರೆಹದಲ್ಲಿರುವ ವಿಷಯಗಳನ್ನು ಓದಿ ಆಗ ಕೈ ಬರೆದ ಒಂದು ಪದದಲ್ಲಿನ ಯಾವುದೇ ಅಕ್ಷರವನ್ನು ಗುರುತಿಸಲು ಸಾಧ್ಯವಾಗದಿದ್ದಾಗ ಆ ಅಕ್ಷರದ ಹಿಂದಿನ ಮುಂದಿನ ಅಕ್ಷರಗಳನ್ನು ಆಧರಿಸಿ ಅದು ಯಾವ ಅಕ್ಷರ ಎಂದು ಗುರುತಿಸಬಹುದು. ವಾಕ್ಯದಲ್ಲಿನ ಒಂದು ಪದ ಗೊತ್ತಾಗದಿದ್ದರೆ ಆ ಪದದ ಹಿಂದಿನ ಮುಂದಿನ ಪದಗಳನ್ನು ಆಧರಿಸಿ ಅದು ಯಾವ ಪದ ಎಂದು ಗುರುತಿಸಬಹುದು. ಒಂದು ವಾಕ್ಯವೇ ಗೊತ್ತಾಗದಿದ್ದರೆ ಆ ವಾಕ್ಯದ ಹಿಂದಿನ ಮುಂದಿನ ವಾಕ್ಯದ ಸಹಾಯದಿಂದ ಗುರುತಿಸಬಹುದು.

______________________________________________

______________________________________________